# ಮತಿಭ್ರಮಣೆ @ICU

## ತೀವ್ರ ನಿಗಾ ಘಟಕದಲ್ಲಿ ರೋಗಿಯ ಪೇಚಾಟ



**ಆರೋಗ್ಯದ ತೀವ್ರ ಏರುಪೇರು ಉಂಟಾದಾಗ ಹೆಚ್ಚಿನ ಮುತುವರ್ಜಿಯ ಆರೈಕೆಗಾಗಿ ರೋಗಿಯನ್ನು ಐಸಿಯುಗೆ ಹಾಕಲಾಗುತ್ತದೆ. ಆಗ ಕೆಲ ರೋಗಿಗಳಲ್ಲಿ ಚಿತ್ತಭ್ರಮೆಗೆ ಅಥವಾ ಭ್ರಮೆ ಭ್ರಾಂತು ಉಂಟಾಗುವ ಸಾಧ್ಯತೆ ಇದೆ. ಇದು ಬಹುತೇಕ ಹಠಾತ್ತನೆ ಶುರುವಾಗಿ, ಎಷ್ಟೋ ಸಲ ಕೆಲ ದಿನಗಳ ಅವಧಿಯೊಳಗೆ ಶಮನವೂ ಆಗುತ್ತದೆ.**

■ ಡಾ. ಅರುಣಾ ಯಡಿಯಾಳ್

‘ಅಯ್ಯೋ ಡಾಕ್ಟ್ರೇ, ಏನೂಂತ ಹೇಳೋದು ನಮ್ಮ ಗೋಳನ್ನು? ನಮ್ಮ ಅಮ್ಮನಿಗೆ 67 ವರ್ಷ ವಯಸ್ಸು. ಕಾಯಿಲೆ ಕಸಾಲೆ ಇಲ್ಲದೆ ಗುಂಡುಕಲ್ಲಿನಂತಿದ್ದವರು. ಮೊನ್ನೆ ಜ್ವರ ಬಂತು. ಟೆಸ್ಟ್ ಮಾಡ್ಸಿದ್ರೆ ಕೊರೊನಾ ಪಾಸಿಟಿವ್ ಬಂತು. ಸರಿ, ಆಸ್ಪತ್ರೆ ಸೇರಿಸಿದ್ವಿ. ಕಾಯಿಲೆ ಜೋರಾಗಿ ಐಸಿಯುಗೆ ಶಿಫ್ಟ್ ಮಾಡಿದ್ರು. ಎರಡು ದಿನದ ನಂತರ ಹುಷಾರಾಗೊ ಬದಲು ಅಮ್ಮ ಹೇಗೆ ಹೇಗೋ ಆಡಲು ಶುರುಮಾಡಿದ್ರು.

ಗೋಡೆಯಲ್ಲಿ ಹಾವುಂಟು ಅಂತ ಚೀರೋದು, ಮಣಮಣ ಮಾತಾಡೋದು, ನಮ್ಮನ್ನು ಕೂಡ ಗುರುತು ಹಿಡೀತಿರಲಿಲ್ಲ.. ರಾತ್ರಿಯೆಲ್ಲಾ ಎಚ್ಚರ ಇರೋದು, ಕೂಗಾಡೋದು, ಬೆಳಿಗ್ಗೆ ನಿದ್ದೆ ಮಾಡೋದು, ಕೈಗೆ ಸಿಕ್ಕಿಸಿದ್ದ ಟ್ಯೂಬ್‌ಗಳನೆಲ್ಲಾ ಕಿತ್ತುಕೊಳ್ಳೋದು. ಒಂದೇ ಎರಡೇ. ಎರಡೇ ದಿನಕ್ಕೆ ಸಾಕು ಸಾಕು ಮಾಡಿಬಿಟ್ಲು. ನಂತರ ಈಗ ಸ್ವಲ್ಪ ಸುಧಾರಿಸಿದ್ದಾಳೆ. ಅದೇ ಸಮಾಧಾನ ನಮಗೆ. ಸರಿಯಿದ್ದ ನಮ್ಮಮ್ಮ ಹೀಗೆ ಆಗಿದ್ದಾದರೂ ಹೇಗೆ? ಯಾಕೆ ಅಂತ... ಹೀಗೆ ಪರಿಚಯದ ರೋಗಿ ಬಾಂಧವರೊಬ್ಬರು ಕೇಳಿಕೊಂಡಾಗ , ಅವರಮ್ಮನಿಗೆ ತೀವ್ರ ನಿಗಾ ಘಟಕದೊಳಗಿನ ಮತಿಭ್ರಮಣೆ (ICU Psycosis) ಆಗಿತ್ತು ಎಂದು ವಿವರಿಸಬೇಕಾಯ್ತು.

### ಏನಿದು ಐಸಿಯು ಸೈಕೊಸಿಸ್?

ರೋಗಿಗಳ ದೈಹಿಕ ಅಥವಾ ಮೆದುಳಿನ ಆರೋಗ್ಯ ತೀರಾ ಹದಗೆಟ್ಟಾಗ ತೀವ್ರ ನಿಗಾ ಘಟಕಕ್ಕೆ ಹಾಕುವುದು ವಾಡಿಕೆ. ಆಗ ಅಲ್ಲಿನ ರೋಗಿಗಳಲ್ಲಿ ಉಂಟಾಗುವ ಚಿತ್ತಭ್ರಮೆಗೆ ಅಥವಾ ಭ್ರಮೆ ಭ್ರಾಂತುವಿನಿಂದ ಕೂಡಿದ ಕಾಯಿಲೆಗೆ ಈ ಹೆಸರು ಕೊಡಲಾಗಿದೆ. ಇದು ಬಹುತೇಕ ಹಠಾತ್ತನೆ ಶುರುವಾಗಿ ಎಷ್ಟೋ ಸಲ ಕೆಲ ದಿನಗಳ ಅವಧಿಯೊಳಗೆ ಶಮನವೂ ಆಗುತ್ತದೆ. ಆದರೆ ಈ ರೀತಿಯ ಭ್ರಮೆಯನ್ನು ಸರಿಮಾಡಲಾಗದಿದ್ದರೆ ಪ್ರಾಣಕ್ಕೇ ಅಪಾಯವೂ ಆಗಬಹುದು. ಇದನ್ನು ಡೆಲಿರಿಯಂ, ಸನ್ನಿ, ಚಿತ್ತವಿಭ್ರಮೆ, ಭಾವೋನ್ಮಾದ, ಭಾವೋದ್ರೇಕ ಅಂತಲೂ ಕರೆಯಬಹುದು. ಈ ಕಾಯಿಲೆಯಲ್ಲಿ ಯಾವುದಾದರೂ ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರನ್ನು ಐಸಿಯುಗೆ ವರ್ಗಾಯಿಸಿದಾಗ, ಆ ರೋಗಿಗಳಲ್ಲಿ ಹಠಾತ್ತನೆ ಒಂದು ಅಯೋಮಯ ಸ್ಥಿತಿ ಕಾಣಿಸಿಕೊಳ್ಳುತ್ತದೆ. ರೋಗಿಯ ಮೊದಲಿನ ಸ್ಥಿತಿಗಿಂತ ಇದು ತೀರಾ ವಿಭಿನ್ನವಾಗಿ ಗೋಚರಿಸುತ್ತದೆ.

ನೋಡನೋಡುತ್ತಿದ್ದಹಾಗೆ ರೋಗಿಯ ಮನಸ್ಥಿತಿಯಲ್ಲಿ ತೀವ್ರ ಬದಲಾವಣೆಗಳು ಆಗುತ್ತವೆ. ಮಾನಸಿಕ ಸ್ಥಿತಿ ಹದಗೆಡುತ್ತಾ ಸಾಗುತ್ತದೆ. ತಮ್ಮ ಸುತ್ತಲಿನ ಪರಿಸರದ ಗೋಚರವಿಲ್ಲದಂತೆ ಇರುತ್ತಾರೆ.